ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.— ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತೆರಡನೇ ಪಟ್ಟಿಯ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಇಡಂತ್ತಿದ್ದೇನೆ.

''ಇಂದಿರಾ ಆವಾಜ್'' ನಿವೇಶನಗಳ ಕುರಿತಂ

೧೫೫೧. ಶ್ರೀ ಗೋಪಾಲ ಮಂಕಂದಕಾನಡೆ (ಸಿರ್ಸಿ).— ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫–೮೬, ೮೬–೮೭ ಮತ್ತು ೮೭–೮೮ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ''ಇಂದಿರಾ ಆವಾಜ್'' ಗ್ರೂಪ್ ನಿವೇಶನದ ಯೋಜನೆಗೆ ಬಿಡುಗಡೆ ಮಾಡಿದ ಹಣವೆಷ್ಟು ?

ಆ) ಈ ಯೋಜನೆಗಾಗಿ ಕೇಂದ್ರ ಸರ್ಕಾರದವರು ಬಿಡುಗಡೆ ಮಾಡಿರುವ ಹಣವೆಷ್ಟು ? ಈ ಬಾಬ್ತು ಖರ್ಚಾಗಿರುವ ಹಣವೆಷ್ಟು ?

ಇ) ಸದರಿ ಯೋಜನೆಯಲ್ಲಿ ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಒದಗಿಸಿರುವ ನಿವೇಶನಗಳೆಷ್ಟು? (ವರ್ಗವಾರು ವಿವರ ನೀಡುವುದು)

ಈ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ ತಾಲ್ಲೂಕಿನಲ್ಲಿ ಈ ಯೋಜನೆಯಡಿಯಲ್ಲಿ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ವಸತಿ ಯೋಜನೆಗೆ ಬಿಟ್ಟು ಮನೆಗಳ ನಿವೇಶನಗಳಿಗಾಗಿ ಹಣ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ. ಇದು ಕೇಂದ್ರ ಸರ್ಕಾರದಿಂದ ಅಂಗೀಕೃತವಾದ ಮತ್ತು ಕೇಂದ್ರವೇ ಭರಿಸಂವಂತಹ ಯೋಜನೆಯಾಗಿರುತ್ತದೆ. ಆದ್ದರಿಂದ ರಾಜ್ಯ ಸರ್ಕಾರದ ಹಣವನ್ನು ಒದಗಿಸುವ ಅವಶ್ಯಕತೆ ಇರುವುದಿಲ್ಲ.

ವರ್ಷ	ಬಿಡುಗಡೆಯಾದ ಹಣ	ಖರ್ಚಾದ ಹಣ
೧೯೮೫–೮೬	೪೬೭.೦೦೧ ಲಕ್ಷ	೪೬೭.೦೦೦ ಲಕ್ಷ
೧೯೮೬–೮೭	೧೧೦೦.೦೦೦ ಲಕ್ಷ	೧೦೨೭.೫೦೦ ಲಕ್ಷ
೧೯೮೭–೮೮		

ಇ) ಈ ಕಾರ್ಯಕ್ರಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಾತ್ರ ಮೀಸಲಾಗಿದೆ. ಜಿಲ್ಲೆ ಮತ್ತು ತಾಲ್ಲೂಕುವಾರು ವಿವರಗಳನ್ನು ಇದಕ್ಕೆ ಲಗತ್ತಿಸಿರುವ ತಃಖ್ತೆ 'ಅ'ನಲ್ಲಿ ಕೊಟ್ಟಿರುತ್ತದೆ.

ಈ) ಮೊದಲನೇ ಮತ್ತು ಎರಡನೇ ಹಂತದಲ್ಲಿ ಸಿರ್ಸಿ ತಾಲ್ಲೂಕಿಗೆ ೨೦ ನಿವೇಶನಗಳನ್ನು ಮಂಚಲಾಗಿದೆ ಮತ್ತು ೨೦ ಮನೆಗಳನ್ನು ತೆಗೆದುಕೊಳ್ಳಲು ಮಂಜೂರು ಮಾಡಿರುತ್ತದೆ ಮತ್ತು, ಸಿದ್ದಾಪುರ ತಾಲ್ಲೂಕಿಗೆ ಯಾವುದನ್ನೂ ಕೊಡಲಾಗಿಲ್ಲ.